# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **171 (1691)**
ಸದಸ್ಯರ ಹೆಸರು : ಡಾ. ಉಮಾಶ್ರೀ (ನಾಮನಿರ್ದೇಶಿತರು)
ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸಬೇಕಾದ ದಿನಾಂಕ : **18.03.2026**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಇತ್ತೀಚಿಗೆ ಸ್ಲೀಪರ್ ಕೋಚ್ ಬಸ್‌ಗಳಲ್ಲಿ ಬೆಂಕಿ ಕಾಣಿಸಿಕೊಳ್ಳುವ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರಯಾಣಿಕರ ಸುರಕ್ಷತೆಗಾಗಿ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿದೆ; | ರಾಜ್ಯದಲ್ಲಿ ಇತ್ತೀಚಿಗೆ ಕೆಲವು ಸ್ಲೀಪರ್ ಕೋಚ್ ಬಸ್‌ಗಳಲ್ಲಿ ಬೆಂಕಿ ಕಾಣಿಸಿಕೊಳ್ಳುವ ಪ್ರಕರಣಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ದಿನಾಂಕ: 21-01-2026 ರಂದು ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಎಲ್ಲಾ ಖಾಸಗಿ ಬಸ್ಸುಗಳ ಮಾಲೀಕರು/ಸಾರಿಗೆ ಪ್ರವರ್ತಕರು/ ಬಸ್ ಕವಚ ನಿರ್ಮಾಣದಾರರುಗಳ ಸಭೆಯನ್ನು ನಡೆಸಿ, ರಾಜ್ಯದಲ್ಲಿ ನೋಂದಣಿಯಾಗಿರುವ ಎಲ್ಲಾ ಸಾಮಾನ್ಯ ಹಾಗೂ ಸ್ಲೀಪರ್ ಕೋಚ್ ಬಸ್‌ಗಳಲ್ಲಿ ಕೇಂದ್ರ ಮೋಟಾರು ವಾಹನ ನಿಯಮಗಳು 1989 ರ ನಿಯಮ 125-C ರಲ್ಲಿ ತಿಳಿಸಿರುವಂತೆ ಹಾಗೂ AIS:119 ರಲ್ಲಿ ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಹಾಗೂ ಸದರಿ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸ್ಪಷ್ಟ ಸೂಚನೆಗಳನ್ನು ನೀಡಲಾಗಿರುತ್ತದೆ.<br><br>ಮುಂದುವರೆದು, ಸದರಿ ಸಭೆಯಲ್ಲಿ ಪ್ರಯಾಣಿಕರ ಸುರಕ್ಷತೆಗೆ ಸಂಬಂಧಪಟ್ಟಂತೆ ಜಾಗೃತಿ ಮೂಡಿಸುವ ಸಲುವಾಗಿ ಎಲ್ಲಾ ಬಸ್ಸುಗಳಲ್ಲಿ Public Address System ಅಳವಡಿಸಿ ಅಗತ್ಯ ಸುರಕ್ಷತಾ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಲಾಗಿದೆ. ಈ ಸಂಬಂಧ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸೂಚಿಸಿರುವಂತೆ ವಾಹನಗಳಲ್ಲಿ ಪ್ರಯಾಣಿಕರ ಸುರಕ್ಷತೆ ಕುರಿತು Central Institute of Road Transport (CIRT) ಸಂಸ್ಥೆಯು ನೀಡಿರುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಮಾರ್ಗಸೂಚಿಗಳ ಸಾರ್ವಜನಿಕ ಪತ್ರಿಕಾ ಪ್ರಕಟಣೆಯನ್ನು ಇಲಾಖಾ ವತಿಯಿಂದ ಹೊರಡಿಸಲು ಕ್ರಮ ಕೈಗೊಂಡು ದಿನಾಂಕ: 12-02-2026ರ ದಿನಪತ್ರಿಕೆಗಳಲ್ಲಿ ಈ ಕೆಳಕಂಡ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಪ್ರಕಟಣೆ ಹೊರಡಿಸಲಾಗಿರುತ್ತದೆ.<br><br>1) ರಾಜ್ಯದಲ್ಲಿ ನೋಂದಾಯಿಸಲಾಗಿರುವ ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಚಾಲಕರ ಹಿಂಬದಿ ಅಳವಡಿಸಿರುವ ವಿಭಜಕದ ಬಾಗಿಲನ್ನು ತೆಗೆದುಹಾಕುವುದು.<br><br>2) ರಾಜ್ಯದಲ್ಲಿ ನೋಂದಾಯಿಸಲಾಗಿರುವ ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಸ್ಲೀಪರ್ ಬರ್ತ್‌ಗಳಿಗೆ ಅಳವಡಿಸಿರುವ ಸ್ಲೈಡರ್‌ಗಳನ್ನು ತೆಗೆದುಹಾಕುವುದು.<br><br>3) ದಿನಾಂಕ:01.04.2019ರ ನಂತರ ನೋಂದಣಿಯಾಗಿರುವ ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ fire Detection and Suppression System (FDSS) ಗಳನ್ನು ಕಡ್ಡಾಯವಾಗಿ ಅಳವಡಿಸುವುದು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 4) ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳ ನಿಬಂಧನೆಗಳನ್ನು ಉಲ್ಲಂಘಿಸಿ, ಸ್ಲೀಪರ್ ಕೋಚ್ ಬಸ್‌ಗಳಲ್ಲಿ ಸೇರಿದಂತೆ ಎಲ್ಲಾ ಪ್ರಯಾಣಿಕ ಬಸ್‌ಗಳಲ್ಲಿ ವಾಣಿಜ್ಯ ಸರಕುಗಳನ್ನು ಸಾಗಿಸುವಂತಿಲ್ಲ.<br><br>5) ಚಾಸಿಸ್ ಅನ್ನು ಅನಧಿಕೃತವಾಗಿ ವಿಸ್ತರಣೆ ಮಾಡಿ ನಿರ್ಮಿಸಿರುವ ಬಸ್ಸುಗಳ ಕಾರ್ಯಾಚರಣೆಯನ್ನು ನಿಲ್ಲಿಸುವುದು.<br><br>6) ಪ್ರತಿಯೊಂದು ಬಸ್ಸಿನಲ್ಲಿ ಕಡ್ಡಾಯವಾಗಿ ತುರ್ತು ನಿರ್ಗಮನ ದ್ವಾರ, ಅಗ್ನಿ ಶಾಮಕ ಸಾಧನ ಅಳವಡಿಕೆ, ಬಸ್ಸಿನ ಛಾವಣಿಯ ಹ್ಯಾಚ್‌ಗಳೊಂದಿಗೆ ವಿನ್ಯಾಸ ರೇಖಾ ಚಿತ್ರವನ್ನು ಪ್ರಯಾಣಿಕರಿಗೆ ಸುಲಭವಾಗಿ ಓದಲು ಅನುಕೂಲವಾಗುವ ಸ್ಥಳದಲ್ಲಿ ವಾಹನದ ಒಳಗೆ ಪ್ರದರ್ಶಿಸಿರಬೇಕು.<br><br>7) ಬಸ್ ಬಾಡಿ ಕೋಡ್ AIS:119ರಲ್ಲಿ ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ 12 ಮೀಟರ್ ಉದ್ದಳತೆಯ ಬಸ್ಸುಗಳಲ್ಲಿ ಕನಿಷ್ಠ 4 ತುರ್ತು ನಿರ್ಗಮನ ದ್ವಾರಗಳು ಮತ್ತು 12 ಮೀಟರ್‌ಗಿಂತ ಹೆಚ್ಚಿನ ಉದ್ದಳತೆಯ ಬಸ್ಸುಗಳಲ್ಲಿ ಕನಿಷ್ಠ 5 ತುರ್ತು ನಿರ್ಗಮನ ದ್ವಾರಗಳು ಇರತಕ್ಕದ್ದು.<br><br>8) AIS:52 ಹಾಗೂ AIS:119ಕ್ಕೆ ಅನುಗುಣವಾಗಿ ಬಸ್ಸುಗಳ ಮೇಲ್ಛಾವಣಿಗಳಲ್ಲಿ ಲಗೇಜ್ ಕ್ಯಾರಿಯರ್‌ಗಳನ್ನು ಹಾಗೂ ಏಣಿಗಳನ್ನು ತೆಗೆದುಹಾಕುವುದು.<br><br>9) ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಕನಿಷ್ಠ 10 ಕೆ.ಜಿ. ಸಾಮರ್ಥ್ಯದ ಅಗ್ನಿಶಾಮಕ ಸಾಧನಗಳನ್ನು ಅಳವಡಿಸುವುದು.<br><br>10) ಬಸ್ ಕವಚ ನಿರ್ಮಾಣ ಸಂಸ್ಥೆಗಳು ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 126 ರಂತೆ ಹೊಂದಿರುವ ಪ್ರಮಾಣಪತ್ರ ಸಿಂಧುತ್ವವಿದ್ದು, ಸದರಿ ಕಂಪನಿಗಳು ನಿರ್ಮಿಸುವ ವಾಹನಗಳನ್ನು ಮಾತ್ರ ನೋಂದಾಯಿಸಲಾಗುವುದು.<br><br>11) ಅನುಮೋದಿತ ಟೆಸ್ಟಿಂಗ್ ಏಜೆನ್ಸಿಗಳು ನೀಡುವ ಪ್ರಮಾಣ ಪತ್ರ ನಮೂನೆ 22 ಮತ್ತು 22A ಗಳನ್ನು ಪರಿಶೀಲಿಸಿದ ನಂತರವೇ ವಾಹನಗಳನ್ನು ನೋಂದಾಯಿಸಲಾಗುವುದು.<br><br>ಈ ಮೇಲೆ ವಿವರಿಸಿರುವಂತೆ ಬಸ್ಸುಗಳಲ್ಲಿ ತುರ್ತು ನಿರ್ಗಮನ ವ್ಯವಸ್ಥೆ, ಅಗ್ನಿಶಾಮಕ ಸಾಧನ ಅಳವಡಿಕೆ ಹಾಗೂ ಇನ್ನಿತರ ಸುರಕ್ಷತಾ ವ್ಯವಸ್ಥೆಗಳನ್ನು ಅಳವಡಿಸಿರುವ ಬಗ್ಗೆ ವಾಹನಗಳನ್ನು ನೋಂದಣಿ ಮತ್ತು ಅರ್ಹತಾ ಪತ್ರ ನವೀಕರಣಕ್ಕೆ ಬಂದಂತಹ ಸಂದರ್ಭಗಳಲ್ಲಿ ಹಾಗೂ ವಾಹನಗಳ ತಪಾಸಣಾ ಸಮಯದಲ್ಲಿ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಆ) | ಸರ್ಕಾರಿ ಮತ್ತು ಖಾಸಗಿ ಸ್ಲೀಪರ್ ಹಾಗೂ ಐಷಾರಾಮಿ ಬಸ್‌ಗಳಲ್ಲಿ ಪ್ರಯಾಣಿಕರೊಂದಿಗೆ ಸರಕು ಸಾಗಾಣಿಕೆ (Parcel) ಹೆಚ್ಚಾಗಿ ಮಾಡುತ್ತಿರುವ ಹಿನ್ನಲೆಯಲ್ಲಿ ಅಗ್ನಿ ಅವಘಡ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಿಸಿದೆಯೇ; | ಸರ್ಕಾರಿ ಮತ್ತು ಖಾಸಗಿ ಸ್ಲೀಪರ್ ಹಾಗೂ ಐಷಾರಾಮಿ ಬಸ್‌ಗಳಲ್ಲಿ ಪ್ರಯಾಣಿಕರಿಗೆ ಸಂಬಂಧಿಸಿದಂತೆ ಸರಕುಗಳನ್ನು ಇಂತಿಷ್ಟೇ ಪ್ರಮಾಣದಲ್ಲಿ ಕೊಂಡೊಯ್ಯಬೇಕೆಂಬ ನಿಬಂಧನೆಯನ್ನು AIS:153 (Additional requirements for bus constructions) ರಲ್ಲಿ ನಿಗದಿಪಡಿಸಲಾಗಿರುತ್ತದೆ ಹಾಗೂ ಯಾವ ರೀತಿಯ ಲಗೇಜುಗಳನ್ನು ಬಸ್ಸುಗಳಲ್ಲಿ ಕೊಂಡೊಯ್ಯಬಾರದು ಎಂಬ ಬಗ್ಗೆ ರಹದಾರಿ ನಿಯಮಗಳಲ್ಲಿ ನಮೂದಿಸಲಾಗಿರುತ್ತದೆ.<br><br>ಮುಂದುವರೆದು, ಭಾರತ ಸರ್ಕಾರದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ದಿನಾಂಕ: 12-01-2026 ರಂದು ನೀಡಿರುವ ನಿರ್ದೇಶನಗಳ ಅನುಸಾರ ಪ್ರಯಾಣಿಕರ ವಾಹನಗಳಲ್ಲಿ ಅಧಿಕ ಭಾರ ಹಾಗೂ ಅನಧಿಕೃತ ವಾಣಿಜ್ಯ ಸರಕುಗಳನ್ನು ಸಾಗಿಸುವ ವಾಹನಗಳ ವಿರುದ್ಧ ಕ್ರಮಕೈಗೊಳ್ಳಲಾಗುತ್ತಿದ್ದು, ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ರ ನಿಯಮ 128 (9) (i) ರ ಪ್ರಕಾರ ಪ್ರವಾಸಿ ವಾಹನದ ಹಿಂಭಾಗದಲ್ಲಿ ಅಥವಾ ಬದಿಗಳಲ್ಲಿ ಅಥವಾ ಎರಡರಲ್ಲೂ ಲಗೇಜ್ ಹೋಲ್ಡ್‌ಗಳನ್ನು ಸಾಕಷ್ಟು ಸ್ಥಳ ಮತ್ತು ಗಾತ್ರದೊಂದಿಗೆ Rattle Proof, Dust Proof and Water Proof ಸುರಕ್ಷತಾ ವ್ಯವಸ್ಥೆಯೊಂದಿಗೆ ವಿನ್ಯಾಸಗೊಳಿಸಬೇಕಾಗಿರುತ್ತದೆ. ಸದರಿ ನಿಯಮಗಳನ್ನು ಪಾಲಿಸಿರುವ ಬಗ್ಗೆ ವಾಹನದ ನೋಂದಣಿ/ಅರ್ಹತಾ ಪತ್ರ ನವೀಕರಣ ಮತ್ತು ಪ್ರವರ್ತನ ಸಮಯದಲ್ಲಿ ಭೌತಿಕವಾಗಿ ವಾಹನಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಆದಾಗ್ಯೂ ಅನಧಿಕೃತವಾಗಿ ನಿಯಮ ಉಲ್ಲಂಘಿಸಿ ಸಂಚರಿಸುವ ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ದಂಡ ವಸೂಲಿ ಮಾಡಲಾಗುತ್ತಿದೆ. ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| (ಇ) | ಹಾಗಿದ್ದಲ್ಲಿ, ಇದಕ್ಕೆ ಸೂಕ್ತವಾದ ನೀತಿ ನಿಯಮಗಳನ್ನು ರೂಪಿಸಲಾಗಿದೆಯೇ ಹಾಗೂ ನಿಯಮಗಳನ್ನು ಉಲ್ಲಂಘಿಸಿದವರಿಗೆ ಯಾವ ಶಿಕ್ಷೆಯನ್ನು ವಿಧಿಸಲಾಗುವುದು? | |

**ಟಿಡಿ 32 ಟಿಡಿಕ್ಯೂ 2026**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು